ಬಂಗಾಳಿ ಮೂಲ: ಮಾಯಾ ಸಿದ್ಧಾಂತ
ಕನ್ನಡಕ್ಕೆ: ನಾಗಮಣಿ ಎಸ್.ಎನ್., ಸರಸಿಜ ಆರ್.ಸಿ.
ಕಲೆ: ವೆಂಕಟ್ರಮಣ ಭಟ್

# ಮಗಳು

ನಾನು ಹೌರಾಗೆ ಹೋಗುವ ಬಸ್ ಹತ್ತಿದಾಗ ಚೆನ್ನಾಗಿ ನೆಂದುಹೋಗಿದ್ದೆ. ಖಾಲಿಯೇ ಇದ್ದ ಬಸ್ಸಲ್ಲಿ ಕಿಟಕಿ ಪಕ್ಕ ಕೂತೆ. ಕಿಟಕಿ ಗಾಜಿನ ಕಿಂಡಿಯಿಂದ ತೂರಿ ಬಂದ ಮಳೆ ಹನಿಗಳು ಮತ್ತಷ್ಟು ನನ್ನ ಸೀರೆ ಬ್ಲೌಸನ್ನು ಒದ್ದೆಮಾಡಿದವು.

ಮಳೆ ಬೀಳುತ್ತಿರುವ ರಸ್ತೆಯಲ್ಲಿ ಇಷ್ಟವಿಲ್ಲದೆ ಹೋಗಲೇಬೇಕಾದ ಅನಿವಾರ್ಯದಿಂದೆಂಬಂತೆ ಬಸ್ಸು ಸಾಗುತ್ತಿತ್ತು. ಹೋಗಲೇಬೇಕು ಅದಕ್ಕೆ ಹೋಗುತ್ತಿತ್ತು. ಹಜ್ರಾ ಸರ್ಕಲ್‌ನಿಂದ ರಬೀಂದ್ರ ಸದನ್‌ಗೆ ಬರೋ ಹೊತ್ತಿಗೆ ಅರ್ಧಗಂಟೆ ಹಿಡೀತು. ಅಲ್ಲಿ ತುಂಬಾ ಜನ ಇದ್ದರು. ತಳ್ಳಾಟ ನೂಕಾಟ ಕೂಗಾಟ. ''ಒಳಗೆ ಹೋಗು ದಾದಾ, ಪೂರ್ತಿ ಖಾಲಿ.'' ಅಂತ ಒಬ್ಬರೆಂದರೆ, ''ಏಯ್, ನನ್ನ ಕಾಲ್ ತುಳೀತಾ ಇದಿಯಾ'' ಮತ್ಯಾರೋ ಕೂಗಿದರು. ಈ ಮಾತುಗಳನ್ನು ಕೇಳುತ್ತಾ ಹೊರಗೆ ದಿಟ್ಟಿಸುತ್ತಿದ್ದೆ.

ಇದರ ನಡುವೆ ಒಬ್ಬರು ತೂರಿಕೊಂಡು ನನ್ನ ಪಕ್ಕ ಬಂದು ಕೂತರು. ನೋಡಲು ಕಟ್ಟುಮಸ್ತಾದ ಸ್ಪೋರ್ಟ್ಸ್ ಮ್ಯಾನ್‌ನಂತೆ ಕಾಣುತ್ತಿದ್ದರು. ಬಸ್ಸಿನ ಕಂಡಕ್ಟರ್ ಕ್ಲೀನರ್‌ಗೆ ಹೇಳುತ್ತಿದ್ದ, “ಹೋಯ್ ನೋಡೋ, ಅವನು ಮತ್ತೆ ಬಂದ. ಇವತ್ತು

